**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.3049/2021**

ದಿನಾಂಕಃ 30-01-2026.

| | | |
|---|---|---|
| ಹೆಸರು | ನಲವಾಗಲು ಮಂಜುನಾಥ | ಸಿಡಬ್ಲ್ಯೂ-17 |
| ತಂದೆ ಹೆಸರು | ಹನುಮಂತಪ್ಪ | ಪಿ ಡಬ್ಲ್ಯೂ-07 |
| ವಯಸ್ಸು | 49 ವರ್ಷ | |
| ಉದ್ಯೋಗ | ಡಿ ವೈ ಎಸ್ ಸಿ ಸಿಐಡಿ | |
| ವಾಸಸ್ಥಳ | ದಾವಣಗೆರೆ | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ23-09-2020 ರಿಂದ ದಿಃ23-07-2021 ರವರೆಗೆ ನಾನು ಚಳ್ಳಕೆರೆ ಮತ್ತು ತಳಕು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ11-07-2021 ರಂದು ಚಾಸಾ-16 ರವರಿಂದ ಕಡತ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ-13 ಮತ್ತು 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ15-07-2021 ರಂದು ಅಪಘಾತಪಡಿಸಿದ ವಾಹನವಾದ ಕೆಎ-16-ಡಿ-3834 ವಾಹನದ ತಾಂತ್ರಿಕ ಪರೀಕ್ಷೆಗಾಗಿ ಚಿತ್ರದುರ್ಗರವರ ಆರ್ ಟಿ ಓ ಕಚೇರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ದಿಃ19-07-2021 ರಂದು ಕೆಎ-16-ಡಿ-3834 ವಾಹನದ ಚಾಲಕನಾದ ಆರೋಪಿಯು ಠಾಣೆಗೆ ಹಾಜರಾದ ಮೇರೆಗೆ ಅವನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಪ್ರಕರಣದ ಆರೋಪಿಯನ್ನು ಚಾಸಾ-1 ರವರು ಗುರುತಿಸಿದ ಬಗ್ಗೆ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ. ಸಾಕ್ಷಿಗೆ ನಿಪಿಃ11 ರ ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರ ಅದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ನಂತರ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ-9 ರವರು ಆರೋಪಿಯನ್ನು ಗುರುತಿಸಿದ ಬಗ್ಗೆ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ. ಸದರಿ ಸಮಯದಲ್ಲಿ ಚಾಸಾ-1 ಮತ್ತು 9 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ.

3. ಸದರಿ ಪ್ರಕರಣದ ಆರೋಪಿಯು ತಾನು ಕೆಎ-16-ಡಿ-3834 ವಾಹನದ ಮಾಲೀಕನೆಂದು ತಿಳಿಸಿದ್ದು ಆದ್ದರಿಂದ ಸದರಿಯವರಿಗೆ ನೋಟೀಸ್ ನ್ನು ಜಾರಿ ಮಾಡಿ ಅವರಿಂದ ಉತ್ತರವನ್ನು ಪಡೆದಿರುತ್ತೇನೆ. ಅದೇ ದಿನ ಇಂಡಿಮಿನಿಟಿ ಬಾಂಡ್ ಪಡೆದು, ಭಾವಚಿತ್ರಗಳನ್ನು ತೆಗೆದು ಸದರಿ ವಾಹನವನ್ನು ಆರೋಪಿಯ ಮಧ್ಯಂತರ ವಶಕ್ಕೆ ನೀಡಿರುತ್ತೇನೆ.

4. ಸಾಕ್ಷಿಗೆ 133 ಐಎಂವಿ ನೋಟೀಸ್ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 133 ಐಎಂವಿ ನೋಟೀಸ್ ನಿಪಿಃ17 ಅಂತಾ, ಸಾಕ್ಷಿಯ ಸಹಿಯನ್ನು

ನಿಪಿ.17(ಎ)ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಆರೋಪಿ ನೀಡಿದ ಉತ್ತರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಉತ್ತರವನ್ನು ನಿಪಿಃ18 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.18(ಎ)ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಇಂಡಿಮಿನಿಟಿ ಬಾಂಡ್‌ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಇಂಡಿಮಿನಿಟಿ ಬಾಂಡ್‌ನ್ನು ನಿಪಿಃ19 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.19(ಎ)ಅಂತಾ ಗುರುತಿಸಲಾಯಿತು.

5. ಸಾಕ್ಷಿಗೆ 4 ಭಾವಚಿತ್ರಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು, ಸದರಿ ಭಾವಚಿತ್ರಗಳನ್ನು ವಾಹನ ಬಿಡುಗಡೆಯ ಕಾಲಕ್ಕೆ ತೆಗೆಯಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿಃ20 ರಿಂದ ನಿಪಿಃ23 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿಃ21 ಮತ್ತು ನಿಪಿಃ23 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿಃ21(ಎ) ಮತ್ತು ನಿಪಿಃ23(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-18 ರವರಿಗೆ ಹಸ್ತಾತಂತರಿಸಿರುತ್ತೇನೆ. ನಾನು ದಸ್ತಗಿರಿ ಮಾಡಿದ ಆರೋಪಿಯನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ.

## ಪಾಟೀ ಸವಾಲಲುಃ ಶ್ರೀ ವಿ ಜಿ ಪಿ, ಆರೋಪಿ ಪರ ವಕೀಲರಿಂದಃ

6. ದಿಃ11-07-2021 ರಂದು ಚಾಸಾ-16 ರವರಿಂದ ಕಡತ ಪಡೆದು ತನಿಖೆಯನ್ನು ಮುಂದುವರೆಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗುವ ಕಾಲಕ್ಕೆ ವಾಹನದಲ್ಲಿ ನಿಖರವಾಗಿ ಎಷ್ಟು ಜನರು ಇದ್ದರು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಆರೋಪಿಯನ್ನು ದಸ್ತಗಿರಿ ಮಾಡುವ ವೇಳೆ ಅಪಘಾತವಾಗಿದೆ ಎನ್ನಲಾದ ಕಾಲದಲ್ಲಿ ಎಷ್ಟು ಜನ ಪ್ರಯಾಣಿಸುತ್ತಿದ್ದರು ಎಂದು ನಾನು ವಿಚಾರಣೆ ಮಾಡಿರುತ್ತೇನೆ. ಆರೋಪಿ 133 ಐಎಂವಿ ನೋಟೀಸ್ ನೀಡಿದ ಉತ್ತರದಲ್ಲಿ ಎಲ್ಲವನ್ನು ತಿಳಿಸಿರುತ್ತಾನೆ. ಅಪಘಾತವಾದ ದಿನ ಮೃತ ಸುಶ್ಮಿತ ಅಪಘಾತಕ್ಕೀಡಾದ ವಾಹನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಚಾಸಾ-1 ರವರೊಂದಿಗೆ ಷರೀಕಾಗಿ ಆರೋಪಿಯ ವಿರುದ್ಧ ಸುಳ್ಳು ತನಿಖೆ ಕೈಗೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರೊಂದಿಗೆ ಷರೀಕಾಗಿ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 9 ರವರ ಮರು ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ತನಿಖೆಯ ಕಾಲದಲ್ಲಿ ಪಡೆದಿರುವ ಎಲ್ಲಾ ದಾಖಲೆಗಳು ಠಾಣೆಯಲ್ಲಿ ಕುಳಿತುಕೊಂಡು ಮಾಡಿಕೊಂಡ ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಚಾಸಾ-1 ರವರೊಂದಿಗೆ ಷರೀಕಾಗಿ ಪ್ರಕರಣಕ್ಕೆ ಅನುಕೂಲವಾಗುವಂತೆ ಭಾವಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಕೈಗೊಳ್ಳದೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.